ಇಲ್ಲದೆ ಏನೂ ಮಾಡಲಾಗದು. ಒತ್ತಡ ಇಲ್ಲದೆ ಉಚ್ಚೆ ಸೈತ ಹೊಯ್ಯಲಾಗುವುದಿಲ್ಲ. (ನಗು)

ಸುಪ್ರೀಂಕೋರ್ಟ್ ತೀರ್ಪು ಬಂದ ಬಳಿಕ ನಮ್ಮ ಮುಖ್ಯಮಂತ್ರಿಯವರು ಇತರ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದರು. ಕೆಲವರಿಂದ ಉತ್ತರ ಬಂತು. ಒಂದ್ಸಲ ಕರೆದರೆ ಎಲ್ಲರೂ ಬರೋದಿಲ್ಲ. ಮತ್ತೆ ಮತ್ತೆ ಕರೆಯಬೇಕು. ಕೋರ್ಟ್ ತೀರ್ಪಿನ ಬಗ್ಗೆ ನಮ್ಮ ಜನಪ್ರತಿನಿಧಿಗಳು ಚರ್ಚೆ ಮಾಡಬೇಕು. ಈಗ ಸಂವಿಧಾನ ತಿದ್ದುಪಡಿ ಒಂದೇ ಮಾರ್ಗ. ನನ್ನ ಅಧ್ಯಕ್ಷ ಭಾಷಣದಲ್ಲಿ ಅದೇ ಮುಖ್ಯ ಅಂಶ. ಸಾಮಾನ್ಯವಾಗಿ ಅಧ್ಯಕ್ಷರ ಭಾಷಣಕ್ಕೆ ಪುರಾತನ ಕನ್ನಡ ಸಾಹಿತ್ಯದ ಕೊಡುಗೆ, ಈಗಿನ ಕನ್ನಡ ಸಾಹಿತ್ಯದ ಟ್ರೆಂಡ್– ಹೀಗೆ ಎಲ್ಲವನ್ನೂ ಸೇರಿಸಿಕೊಳ್ತಾರೆ. ನಾನು ಸಾಹಿತ್ಯದ ಅಧಿಕೃತ ವಿದ್ಯಾರ್ಥಿ ಅಲ್ಲ. ನನ್ನದು ಬಿಎ ಎಕನಾಮಿಕ್ಸ್ ಮತ್ತು ಇಂಗ್ಲಿಷ್ ಎಂಎ. ನನಗೆ ಕನ್ನಡ ಸಾಹಿತ್ಯದ ನೇರ ಪರಿಚಯ ಇಲ್ಲ. ನನ್ನ ಗಮನ ಏನಿದ್ದರೂ ವರ್ತಮಾನದ ಮೇಲೆ. ಈಗ ಕನ್ನಡಕ್ಕೆ ಏನಾಗಬೇಕು ಎನ್ನುವುದರ ಬಗ್ಗೆಯೇ ಮಾತನಾಡುವೆ.

**★ ನಿಮ್ಮದು ಸಾಹಿತ್ಯಕ್ಕಿಂತ ಹೆಚ್ಚಾಗಿ ಸಾಂಸ್ಕೃತಿಕ ವ್ಯಕ್ತಿತ್ವ. ನೀವು ಬಹುತೇಕ ಎಲ್ಲ ಜನಚಳವಳಿಗಳ ಜತೆಗೆ ಗುರುತಿಸಿಕೊಂಡವರು. ರಾಜಕೀಯದ ಒಲವು ಹೆಚ್ಚು.**

**ಚಂಪಾ:** ದೇಶದ ವಾತಾವರಣಾನೂ ಕೆಟ್ಟು ಹೋಗಿದೆಯಲ್ಲ.. ನಮ್ಮೆದುರೇ ನಮ್ಮವರ ಎರಡು ಕೊಲೆಗಳಾದವು. ಅದನ್ನು ನಾವು 'ಸೋ ಕಾಲ್ಡ್ ' ಎಚ್ಚೆತ್ತ ಪ್ರಜ್ಞೆಯುಳ್ಳವರು ಪ್ರಶ್ನಿಸಲೇಬೇಕು. ನೀವು ಸುಮ್ಮಿದ್ದರೂ ರಾಜಕೀಯ ಅಂತಾರೆ. ಮಾತನಾಡಿದರೂ ರಾಜಕೀಯ ಅಂತಾರೆ. ಸಾಹಿತಿಗಳ ಈ ಕೊಲೆ ನಮಗೆ ಗಂಭೀರ ಸಂಗತಿ. ತನಿಖೆ ನಡೀತಿದೆ. ಆದರೆ ಬೇಗ ಪತ್ತೆ ಆಗ್ತದೆ ಅಂತ ನನಗಂತೂ ವಿಶ್ವಾಸ ಇಲ್ಲ. ದಾಬೋಲ್ಕರ್, ಪನ್ಸಾರೆ, ಕಲ್ಬುರ್ಗಿ.. ಈಗ ಗೌರಿ ಲಂಕೇಶ್. ಕಲ್ಬುರ್ಗಿಯವರನ್ನೂ ನಾವೀಗ ಮರೆತೇ ಬಿಟ್ಟಿದ್ದೇವೆ. ಪ್ರಜಾಪ್ರಭುತ್ವ ಮತ್ತು ಹೋರಾಟದಲ್ಲಿ ನಂಬಿಕೆ ಇಟ್ಟವರು ಗಂಭೀರವಾಗಿ ಚರ್ಚಿಸಬೇಕಾದ ವಿಷಯವಿದು.

**★ ಸಾಹಿತಿ ಆಗುವುದಕ್ಕಿಂತ ಹೆಚ್ಚಾಗಿ ಆ್ಯಕ್ಟಿವಿಸ್ಟ್ ಆಗಿದ್ದೀರಿ ಎನ್ನುವವರಿದ್ದಾರೆ?**

**ಚಂಪಾ:** ಸಾಹಿತಿಗಳು ಅಕ್ಷರದ ಮೂಲಕ ಆಕ್ಟಿವಿಸ್ಟ್. ಸಹಜವಾಗಿಯೇ ಬಯಲಿಗೆ ಬರ್ತಾರೆ. ಬೀದಿಗೆ ಇಳೀಲಿಲ್ಲ ಎಂದರೆ ನಾವೆಲ್ಲಿ ಸಾಹಿತಿಗಳಾಗ್ತೀವಿ? ಆಗ ನಾವು ಬರೀ ಅಕ್ಷರದ ಸೃಷ್ಟಿಕರ್ತರಾಗುತ್ತಿದ್ದೆವು. ನಮ್ಮ ಜನರ ಸಮಸ್ಯೆ, ತುರ್ತು, ಸಂಕಟ ಬೀದಿಗಿಳಿದರೆ ಮಾತ್ರ ಗೊತ್ತಾಗೋದು. ರೂಮ್‌ನಲ್ಲಿ ಕೂತುಕೊಂಡ ತಪಸ್ಸು ಮಾಡಿದರೆ ಗೊತ್ತಾಗುವುದಿಲ್ಲ. ಸಾಹಿತಿಯಾದವನು ಆ್ಯಕ್ಟಿವಿಸ್ಟ್ ಆಗಬೇಕು ಎನ್ನುವುದು ನನ್ನ ಅಪೇಕ್ಷೆ. ಕೆಲವರಿಗೆ ಅದು ಇಷ್ಟವಾಗುವುದಿಲ್ಲ. ಬಹಿರಂಗದ, ಸಾರ್ವಜನಿಕ ಜೀವನ ಎಂದರೆ ಅನುಭವದ ಆಕರ. ಆಗ ನಮ್ಮ 'ಕನ್ನಡಂಗಳ್' ಪರಿಚಯ ಆಗುತ್ತೆ. ಜನರ ಬೇರೆ ಬೇರೆ ದೃಷ್ಟಿಕೋನಗಳು ಗೊತ್ತಾಗುತ್ತವೆ. ವಾಸ್ತವವನ್ನು ಬೇರೆ ಬೇರೆ ಕಣ್ಣಿನಿಂದ ನೋಡ್ತೀವಿ. ಇದು ಮಲ್ಟಿಪಲ್ ಪಾಯಿಂಟ್ ಆಫ್ ವ್ಯೂ. ಒಬ್ಬ ಸಾಹಿತಿ ಆದವನಿಗೆ ಇದರ ಅಗತ್ಯವಿದೆ.

**★ ಸಾಹಿತಿ ಎಡಪಂಥೀಯನೇ ಆಗಿರಬೇಕಾ?**

**ಚಂಪಾ:** ಆಗಬೇಕಾಗಿಲ್ಲ. ಬಲಪಂಥೀಯನೂ ಆಗಬಹುದು. ಅದು ಅವನಿಗೆ ಬಿಟ್ಟದ್ದು. ಬಂಡಾಯ ಸಾಹಿತ್ಯ ಸಂಘಟನೆಯ ಕಕ್ಷೆಯೊಳಗೆ ಮುಖ್ಯವಾಗಿ ಮಾರ್ಕ್ಸ್‌ವಾದಿ, ಸಮಾಜವಾದಿ ಮತ್ತು ಅಂಬೇಡ್ಕರ್‌ವಾದಿಗಳಿದ್ದರು. ಪ್ರಗತಿಪರ ವಿಚಾರಗಳನ್ನು ಇಟ್ಟುಕೊಂಡವರೂ ಬಂದರು. ಅದೊಂದು ವಿಶಾಲ ಎಡಪಂಥ. ಬಂಡಾಯ ಸಂಘಟನೆಯ ಬಹಳ ದೊಡ್ಡ ಗುಣವದು. ಹಿಂದೆ ಬರಹಗಾರರ ಒಕ್ಕೂಟದಲ್ಲಿ ಬ್ರಾಹ್ಮಣರು ಯಾರೂ ಇರಲಿಲ್ಲ. ನಾವು ಕರಕೊಳ್ಳಲಿಲ್ಲ, ಅವರು ಬರಲಿಲ್ಲ. ಬಂಡಾಯದ ಚಳವಳಿ ಅದಕ್ಕಿಂತ ಭಿನ್ನ. ನಮ್ಮೊಳಗೇ ವಿರೋಧಾಭಾಸ, ಜಗಳ, ವಾದ–ವಿವಾದ ಎಲ್ಲವೂ ಇದ್ದವು.

**★ ನೀವೂ ಬಂಡಾಯ ಸಂಘಟನೆಯನ್ನು ಟೀಕಿಸಿದಿರಿ. ಬಿಟ್ಟಿರಿ, ಮತ್ತೆ ಸೇರಿದಿರಿ. ಕಸಾಪದ ಅಧ್ಯಕ್ಷರೂ ಆದಿರಿ...?**

**ಚಂಪಾ:** ನಾನು ಮೊದಲಿನಿಂದಲೂ ಕನ್ನಡ ಸಾಹಿತ್ಯ ಪರಿಸತ್ತಿನ ಸದಸ್ಯ. 1961ರಲ್ಲಿ ಕೆ.ಜಿ.ಕುಂದಣಗಾರರು ಅಧ್ಯಕ್ಷರಾಗಿದ್ದಾಗ ಹಾಜರಾಗಿದ್ದೆ. ಚೆನ್ನವೀರ ಕಣವಿ ಆಗ ಕವಿಗೋಷ್ಠಿ ಅಧ್ಯಕ್ಷರು. 1979ರಲ್ಲಿ ಪರಿಷತ್ತಿನಿಂದ ದೂರವಾದದ್ದು. ಅಂದರೆ ಸುಮಾರು 20 ವರ್ಷ ಪರಿಷತ್ತಿನ ಜತೆಗೆ ಇದ್ದೆ. ನವೋದಯದ ಎಲ್ಲ ಹಿರಿಯ ಸಾಹಿತಿಗಳು ಪರಿಷತ್ತಿನ ಜತೆಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದರು. ಪ್ರಗತಿಶೀಲ ಸಾಹಿತ್ಯ ಬಂದಾಗ ಸ್ವಲ್ಪ ದೂರ ಆದೆವು. ನಿರಂಜನ, ಕಟ್ಟೀಮನಿ, ಅನಕೃ ಎಲ್ಲರೂ ದೂರ ಸರಿದರು. ನವ್ಯ ಬಂದಾಗಲೂ ಅಂತರ ಇನ್ನಷ್ಟು ಹೆಚ್ಚಿತು. ಬಂಡಾಯ, ದಲಿತ ಸಾಹಿತಿಗಳು ಯಾರೂ ಹೋಗಲಿಲ್ಲ. ಮುಂದೆ ಕಸಾಪ ಬಲಪಂಥೀಯರ ಕೈಗೂ ಸಿಕ್ತು. ಕಸಾಪದ ಇಡೀ ಚರಿತ್ರೆ ನೋಡಿದರೆ ಆರಂಭದಲ್ಲಿ ನೂರಕ್ಕೆ 80ರಷ್ಟು ಬ್ರಾಹ್ಮಣರೇ ಇದ್ದರು. ಬಳಿಕ ಲಿಂಗಾಯತರು ಪ್ರವೇಶಿಸಿದರು. ಅಕ್ಷರ ಲೋಕಕ್ಕೆ ಬಂದವರೆಲ್ಲ ನಿಧಾನಕ್ಕೆ ಪರಿಷತ್ತಿಗೂ ಬಂದ್ರು. ಶಿವಮೂರ್ತಿ ಶಾಸ್ತ್ರಿ, ಜಿ.ನಾರಾಯಣ ಮತ್ತು ಹಂಪನಾ ಕಾಲಕ್ಕೆ ಕಸಾಪ ಸಾಮಾಜಿಕ ವಿಸ್ತಾರ ಪಡೆಯಿತು. ಭೌಗೋಳಿಕ ವಿಸ್ತಾರವೂ ಆಯಿತು. ಮೊದಲು ಬರೇ ಸಾಹಿತ್ಯದ ಚರ್ಚೆ ನಡೆಯುತ್ತಿತ್ತು. ಬರಬರುತ್ತಾ ಕನ್ನಡ ಬದುಕಿನ ಎಲ್ಲ ಸಮಸ್ಯೆಗಳೂ ಚರ್ಚೆ ಆಗತೊಡಗಿದವು. ಸಾಹಿತ್ಯವನ್ನು ಮೂಲದಲ್ಲಿ ಇಟ್ಟುಕೊಂಡು ಬದುಕಿನ ಎಲ್ಲ ಸ್ತರಗಳ ಬಗ್ಗೆ ಚರ್ಚೆ ನಡೆಸುವ ಇನ್ನೊಂದು ಸಾಹಿತ್ಯಕ ಸಂಸ್ಥೆ ದೇಶದಲ್ಲಿ ಎಲ್ಲೂ ಇಲ್ಲ. ಲಿಟರರಿ ಗಿಲ್ಡ್‌ಗಳು ಇರಬಹುದು. ಕೇರಳ, ಮಹಾರಾಷ್ಟ್ರಗಳಲ್ಲಿ ಆ ಮಾದರಿಗಳಿವೆ. ಇದನ್ನು ಮೀರಿದ ಸಾಂಸ್ಕೃತಿಕ ಸಂಸ್ಥೆ ಕಸಾಪ.

**★ ನೀವು ಕಸಾಪ ಅಧ್ಯಕ್ಷರಾಗಿದ್ದ ಕಾಲದಲ್ಲಿ ರಾಜಕಾರಣಿಗಳು ವೇದಿಕೆ ಏರುವುದು ಹೆಚ್ಚಾಯಿತು..**

**ಚಂಪಾ:** ರಾಜಕೀಯದವರು ಸಾಹಿತ್ಯದ ವೇದಿಕೆಗೆ ಬರಬಾರದು ಎನ್ನುವುದನ್ನು ನಾನು ಒಪ್ಪುವುದಿಲ್ಲ. ರಾಜಕೀಯ ಅನ್ನುವುದು ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಏನು ಸಾಹಿತಿಗಳು ಕಡಿಮೆ ರಾಜಕಾರಣಿಗಳಾ..? ನನ್ನ ಅಧ್ಯಕ್ಷತೆಯಲ್ಲಿ ನಡೆದ ಮೂರು ಸಮ್ಮೇಳನಗಳಲ್ಲಿ ಬೀದರ್ ಸಮ್ಮೇಳನಕ್ಕೆ ಉದ್ಘಾಟನೆಗೆ ಆಗಿನ ಮುಖ್ಯಮಂತ್ರಿ ಧರ್ಮಸಿಂಗ್ ಬರಬೇಕಿತ್ತು, ಬರಲಿಲ್ಲ. ಅವರ ಭಾಷಣ ನಾನೇ ಓದಿದೆ. ಶಿವಮೊಗ್ಗ, ಉಡುಪಿ ಸಮ್ಮೇಳನದಲ್ಲಿ ಸಾಹಿತ್ಯದ ಆಸಕ್ತಿ ಇದ್ದ ರಾಜಕಾರಣಿಗಳು ಪಾಲ್ಗೊಂಡರು. ಎಲ್ಲ ರಾಜಕೀಯ ಪಕ್ಷದೊಳಗೂ ಪ್ರಜ್ಞಾವಂತರು, ಓದಿಕೊಂಡವರಿದ್ದಾರೆ. ನಾಳೆ ನಾವು ಅವರ ಬಳಿಗೇ ಕನ್ನಡದ ಬೇಡಿಕೆಗಳನ್ನು ಇಟ್ಟುಕೊಂಡು ಹೋಗಬೇಕಲ್ಲ? ಅವರ ಬಗ್ಗೆ ವ್ಯಂಗ್ಯ, ಕಾಲೆಳೆಯುವುದು ಎಲ್ಲ ಮಾಡ್ತೀವಿ. ಆದರೆ ಸಮಸ್ಯೆಗಳ ಬಗ್ಗೆ ಅವರಷ್ಟು ಸಾಮಾನ್ಯ ತಿಳವಳಿಕೆ ನಮಗಿಲ್ಲ. ಮುಖ್ಯಮಂತ್ರಿಗಳು ಬಂದು ಬರೀ ಉದ್ಘಾಟನೆ ಮಾಡಿ ಭರವಸೆ ಕೊಟ್ಟುಹೋಗೋದಲ್ಲ. ಇಡೀ ಮೂರು ದಿನ ಸಮ್ಮೇಳನದ ಕಲಾಪಗಳನ್ನು ಅಧಿಕಾರಿಗಳ ಮೂಲಕ ಸಂಗ್ರಹಿಸಿ ಕೊನೆಗೆ ಸಮಾರೋಪ ಭಾಷಣದಲ್ಲಿ ಮಾತನಾಡಬೇಕು. ಶಿವಮೊಗ್ಗದಲ್ಲಿ ಉದ್ಘಾಟನೆಗೆ ಕರೆಯಲಿಲ್ಲ ಎಂದು ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಸಿಟ್ಟಿಗೆದ್ದಿದ್ದರು. ಆದರೂ ಕೊನೆಗೆ ಪಾಲ್ಗೊಂಡರು. ಸರ್ಕಾರದವರು ಸಮ್ಮೇಳನಕ್ಕೆ ಕೊಡುವುದು ನಮ್ಮ ದುಡ್ಡೇ. ಅದನ್ನು ವಿನಯದಿಂದ, ಘನತೆಯಿಂದ ಕೊಡಲಿ. ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಜತೆಗೂ ನನ್ನದು ಅದೇ ಜಗಳ. ಆಗ ಇನ್ನೊಂದು ರಾಜಕೀಯ ನಡೆಯಿತು. ಕಸಾಪದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕೆ.ಎಸ್.ನಿಸಾರ್ ಅಹ್ಮದ್ ಅವರನ್ನು ಸಮ್ಮೇಳನದ ಅಧ್ಯಕ್ಷರಾಗಿಸಲು ಹೊರಟಿದ್ದೆವು. ಶಿವಮೊಗ್ಗದಿಂದ ಕೊನೆಯ ಸೂಚನೆ ಬಂದಿತ್ತು– ಯಾರನ್ನಾದರೂ ಮಾಡ್ರೀ, ಸಾಬರನ್ನು ಮಾಡಬೇಡಿ– ಅಂತ! ನಾನು ಕೇಳಲಿಲ್ಲ. ನಾವು ನಿಸಾರ್ ಅವರನ್ನೇ ಮಾಡಿದೆವು. ಕಸಾಪ ಅನ್ನುವ ಸಂಸ್ಥೆಯನ್ನು ಯಾರೂ ಖರೀದಿ ಮಾಡಲು ಸಾಧ್ಯವಿಲ್ಲ. ಆ ನಿಲುವು ಅಲ್ಲಿ ಕುಳಿತವರಿಗೆ ಇರಬೇಕು.

**★ ಕನ್ನಡದ ಜಾತ್ರೆ ಸರಿ. ಇಲ್ಲಿ ಜೈಕಾರ ಕೂಗುವ ಬಹುತೇಕರು ಮಕ್ಕಳನ್ನು ಇಂಗ್ಲಿಷ್ ಮೀಡಿಯಂ ಶಾಲೆಗೇ ಕಳಿಸುವವರು..**

**ಚಂಪಾ:** ಅದಕ್ಕೆ ಕನ್ನಡ ಅಭಿಮಾನದ ಕೊರತೆ ಕಾರಣವಲ್ಲ. ಅದು ವ್ಯಾವಹಾರಿಕ ಸಂಗತಿ. ನನ್ನ ಮನೆ ಪಕ್ಕದಲ್ಲೇ ಇಂಗ್ಲಿಷ್ ಶಾಲೆ ಇದೆ. ಕೆಟ್ಟ ಇಂಗ್ಲಿಷ್ ಒಳಗೆ. ಹೊರಗೆ ಆಟ, ಜಗಳ ಎಲ್ಲವೂ ಕನ್ನಡದಲ್ಲೇ. 'ಮಿಸ್'ಗಳು ಊಟ ಮಾಡುವಾಗ ಹರಟೆ ಹೊಡೆಯುವುದು ಕನ್ನಡದಲ್ಲೇ.

ಕನ್ನಡ ಅವಸಾನದ ಅಂಚಿನಲ್ಲಿದೆ, ಓದುವ ಅಭಿರುಚಿ ಕಡಿಮೆಯಾಗಿದೆ ಎನ್ನುವ ಕೂಗು ಇದೆ. ಆದರೆ ಇನ್ನೊಂದೆಡೆ ಪತ್ರಿಕೆಗಳ, ಟೀವಿಗಳ ಸಂಖ್ಯೆ ಜಾಸ್ತಿ ಆಗಿದೆ. ವರ್ಷಕ್ಕೆ 7–8 ಸಾವಿರ ಕನ್ನಡ ಪುಸ್ತಕಗಳು ಬರುತ್ತಿವೆ. ಯಾವ ಪುಸ್ತಕ ಅನ್ನೋದು ಬಿಡಿ. ಓದು ಅಂತ ಕರೀತೀವಲ್ಲ, ಅದರ ಅರ್ಥವ್ಯಾಪ್ತಿ ಹೆಚ್ಚಾಗಿದೆ. ಈವರೆಗೆ ಪುಸ್ತಕ ಓದುತ್ತಿದ್ದೆ. ಈಗ ಫೇಸ್ಬುಕ್ ಓದ್ತೀವಿ. ಅದೂ ಬುಕ್ಕೇ ಅಲ್ವಾ? ಬರವಣಿಗೆ ಸಾಧ್ಯತೆಗಳು ಹೆಚ್ಚಾಗಿವೆ. ಮೊದಲು ಕಾದಂಬರಿ ಓದುತ್ತಿದ್ದರು. ಸರ್ಕುಲೇಟಿಂಗ್ ಲೈಬ್ರರಿಗಳು ಇದ್ದವು. ಈಗ ಟಿ.ವಿ ಮುಂದೆ ಅದೇ ಜ್ಞಾನ,